**ಪಾಠ–8** **ನವೆಂಬರ್ 14–20**

# ಶಿಕ್ಷಣ ಮತ್ತು ವಿಮೋಚನೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಆ.ಕಾ. 1:26,27; ಯೆಶಾ 11:1–9; 2 ತಿಮೊಥಿ 3:14–17; 1 ಅರಸು 4:29–34; ಯೋಹಾನ 14:17; 1 ಕೊರಿಂಥ 2:1–16.

**ಸ್ಮರಣವಾಕ್ಯ : "ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ"** 2 ತಿಮೊಥಿ 3:16.

ಸತ್ಯವೇದ, ದೇವರು ಮತ್ತು ಆತನ ಜನರ ಬಗ್ಗೆ ದೊಡ್ಡ ಕಥೆಯನ್ನು ಹೇಳುತ್ತದೆ. ಕೆಲವೊಮ್ಮೆ ಇದೊಂದು ವಕ್ರಗೊಂಡ ಪ್ರೇಮದ ಕಥೆಯೂ ಹೌದು. ಆದರೆ ತಾತ್ಕಾಲಿಕವಾಗಿ ಹಾಗೆ ಕಾಣಬಹುದು ಅಥವಾ ತಂದೆ ಮತ್ತು ಬಂಡಾಯವೆದ್ದ ಆತನ ಮಕ್ಕಳ ಕಥೆಯಂತೆಯೂ ಇದೆ. ಕೊನೆಗೆ ಮಕ್ಕಳು ತಂದೆಯೊಂದಿಗೆ ಒಂದಾಗುವುದರೊಂದಿಗೆ ಕಥೆ ಅಂತ್ಯವಗುತ್ತದೆ.

ಈ ವಾರದ ಬೋಧನೆಯ ಉದ್ದೇಶ ನೆರವೇರುವಿಕೆಗಾಗಿ, ಸತ್ಯವೇದದ ಕಥೆಯಲ್ಲಿ ಮತ್ತೊಂದು ವಿಷಯವನ್ನು ಆರಿಸಿಕೊಳ್ಳೋಣ. ಇದು ಗುರು–ಶಿಷ್ಯರ ಕಥೆ. ಕಥೆಯಲ್ಲಿ, ಗುರು ಶಿಷ್ಯರಿಗೆ ಪರೀಕ್ಷೆಗಳನ್ನು ಕೊಡುತ್ತಲೇ ಇರುತ್ತಾನೆ. ಆದರೆ ಶಿಷ್ಯರು ಅನುತ್ತೀರ್ಣರಾಗುತ್ತಲೇ ಇರುತ್ತಾರೆ. ಆದರೆ ಗುರು ಬೇಸರ

* **ನವೆಂಬರ್ 21ರ ಸಬ್ಬತ್ತಿನ ಪಾಠದ ಸಿದ್ಧತೆಗಾಗಿ ಈ ಪಾಠವನ್ನು ಅಧ್ಯಯನ ಮಾಡಿರಿ.**

ಮಾಡಿಕೊಳ್ಳುವುದಿಲ್ಲ. ಮತ್ತೆ ಮತ್ತೆ ಪಾಠ ಮಾಡುತ್ತಾನೆ. ಕೊನೆಗೆ ಕೆಲವರಾದರೂ ಪಾಠವನ್ನು ಸರಿಯಾಗಿ ಕಲಿಯುತ್ತಾರೆ.

ಸತ್ಯವೇದದ ಕಥೆ, ನಮ್ಮ ಸ್ವಂತ ಮಾನವರ ಕಥೆಗಳಂತಲ್ಲ. ದೇವರ ಮತ್ತು ಆತನ ಜನರ ಕಥೆ ಯಾವಾಗಲೂ ಸುಖಾಂತ್ಯ ಕಾಣುವಂತದ್ದು, ಗುರಿ ಮುಟ್ಟುವಂತದ್ದು. ಅದಕ್ಕೆ ಕಾರಣ ದೇವರು ತನ್ನ ಜನರ ಮೇಲೆ ತೋರುವ ದೈವಿಕ ಕೃಪೆ. ಈ ಸಂಬಂಧದಲ್ಲಿ ಮಾನವನ ಜವಾಬ್ದಾರಿ ಎಷ್ಟೋ ಸಲ ಅಪಾರ್ಥ ಹಾಗು ದಿಗಿಲುಗೊಳಗಾಗಲು ಕಾರಣ, ಆ ಸಂಬಂಧವನ್ನು ಹೊರೆ ಎಂದು ಪರಿಗಣಿಸುವುದು. ನಿಜವಾಗಿ ಹೇಳಬೇಕೆಂದರೆ ಸತ್ಯವೇದದ ಕಥೆ ಅವಶ್ಯವಾಗಿ ದೇವರನ್ನು ಅರಿಯಲು ಮತ್ತು ಅರ್ಥಮಾಡಿಕೊಳ್ಳಲು ಕೊಡಲಾಗುವ ಒಂದು ಆಹ್ವಾನ. ದೇವರನ್ನು ತಿಳಿದುಕೊಳ್ಳುವ ಸಲುವಾಗಿಯೇ ನಡೆಯುವ ಕಲಿಕೆ ಇದೆಯಲ್ಲ ಅದು ಆತನ ಕೃಪೆಗೆ ನಾವು ತೋರುವ ಅತ್ಯುತ್ತಮ ಪ್ರತಿಕ್ರಿಯೆ. ಆ ಕೃಪೆಯನ್ನು ನಾವು ಗಳಿಸಲಾಗದು. ಆದರೆ ಅದರ ಬಗ್ಗೆ ಸಾಕಷ್ಟು ಕಲಿಯಬಹುದು, ಇಂತಹ ಕೃಪೆಯನ್ನು ಶಿಕ್ಷಣ ತನ್ನ ಬೋಧನೆಯ ತಿರುಳಾಗಿ ಹೊಂದಿರದಿದ್ದರೆ, ಅಂತಹ ಕ್ರೈಸ್ತೀಯ ಶಿಕ್ಷಣವೇಕೆ?

**ಭಾನುವಾರ** **ನವೆಂಬರ್ 15**

## ದೇವರ ಸ್ವರೂಪದಲ್ಲಿ

ಆದಿಕಾಂಡ 1:26,27 ಮತ್ತು ಆದಿಕಾಂಡ 5:1,3ನ್ನು ಓದಿಕೊಳ್ಳಿರಿ. ಮಾನವರನ್ನು ಆದಿಯಲ್ಲಿ ದೇವರು ಹೇಗೆ ಸೃಷ್ಟಿ ಮಾಡಿದನು ಮತ್ತು ಮಾನವ ಪಾಪಮಾಡಿದ ನಂತರ ಏನಾಯಿತು ಎಂಬ ವಿಷಯಗಳ ಬಗ್ಗೆ ಮೇಲಿನ ವಾಕ್ಯಗಳು ಹೇಳುವುದೇನು?

"ದೇವರ ಸ್ವರೂಪ" ಎಂಬ ಪದಪುಂಜ ಶತಶತಮಾನಗಳ ಕಾಲ ಸತ್ಯವೇದದ ವ್ಯಾಖ್ಯಾನಕಾರರನ್ನು ಚಿತ್ತಾಕರ್ಷಣೆ ಮಾಡಿತ್ತು. ಆದಿ ತಂದೆ-ತಾಯಿಯರಲ್ಲಿ ದೇವರು ಉಂಟುಮಾಡಿದ ಸ್ವರೂಪ ಎಂತದ್ದು? ಉದಾ: ದೇವರು ತನ್ನನ್ನು

ಕನ್ನಡಿಯಲ್ಲಿ ನೋಡಿಕೊಂಡು, ತನ್ನ ಹಾಗೆ ತನ್ನ ಹೊಸ ಸೃಷ್ಟಿಯನ್ನು ಉಂಟು ಮಾಡಿದನೇ? ಅಥವಾ ಈ ಸೃಷ್ಟಿಯಲ್ಲಿರುವ ಎಲ್ಲ ಜೀವರಾಶಿಗಳಿಗಿಂತ ಮಾನವ ಮಾತ್ರ ಹೆಚ್ಚು ದೇವರ ಹಾಗೆ ಇದ್ದಾನೆಯೇ? ಅಥವಾ ಸೃಷ್ಟಿಕರ್ತನಾದ ದೇವರು ಮತ್ತು ಆತನಿಂದ ಸೃಷ್ಟಿಯಾದ ಮಾನವರ ನಡುವೆ ಆಧ್ಯಾತ್ಮಿಕ ಮತ್ತು ಬೌದ್ಧಿಕ ಸ್ತರಗಳಲ್ಲಿ ಸಮರೂಪತೆ ಮತ್ತು ಅನುರೂಪತೆ ಇದೆಯೇ? ಧರ್ಮಶಾಸ್ತ್ರ ಇಂತಹ ಪ್ರಶ್ನೆಗಳಿಗೆ ಖಚಿತವಾದ ವಿವರ ನೀಡದಿದ್ದರೂ, ಸತ್ಯವೇದದ ವಿದ್ವಾಂಸರುಗಳು ಈ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಅನೇಕ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಅದು ಏನೇ ಇರಲಿ, ಒಂದು ಅಂಶ ಮಾತ್ರ ಸ್ಪಷ್ಟ, ಆದಾಮ ಮತ್ತು ಹವ್ವಳು ಪಾಪ ಮಾಡಿದ ಕ್ಷಣದಿಂದಲೇ ಅವರಿಗಿದ್ದ ಆ ದೈವಸ್ವರೂಪದಲ್ಲಿ ಬದಲಾವಣೆ ಉಂಟಾಯಿತು. ಆದ್ದರಿಂದಲೇ ವೈಟಮ್ಮನವರು- "ಕಳೆದು ಹೋದ ಆ ದೈವಸ್ವರೂಪವನ್ನು ಮತ್ತೆ ಮಾನವರು ಗಳಿಸಲು ಸಹಾಯ ಮಾಡುವುದೇ ಶಿಕ್ಷಣದ ಗುರಿಯಾಗಿರಲಿ" ಎಂದು ಬರೆದಿದ್ದಾರೆ (ಎಜುಕೇಷನ್, ಪುಟ 14-16).

## ಶಿಕ್ಷಣ ಅಂತಹ ಅಸಮಾನ್ಯವಾದ ಗುರಿಯನ್ನು ಸಾಧಿಸುವುದು ಹೇಗೆ?

ಮೊಟ್ಟ ಮೊದಲನೆಯದಾಗಿ, ಈ ಲೋಕದ ತಂದೆ-ತಾಯಿ ತಮ್ಮ ಮಕ್ಕಳೊಂದಿಗೆ ಸಂಬಂಧ ಹೊಂದಲು ಆಶಿಸುವಂತೆಯೇ, ದೇವರು ಸಹ, ಆತನೊಂದಿಗೆ ಸಂಬಂಧ ಹೊಂದಿರುವುದಕ್ಕಾಗಿಯೇ ನಮ್ಮನ್ನು ಸೃಷ್ಟಿಸಿದನು. ನಾವು ಅದನ್ನು ಯಾವತ್ತೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ತಂದೆ-ತಾಯಿಗಳು ತಮ್ಮ ಸ್ವರೂಪದಲ್ಲಿ ಮಕ್ಕಳನ್ನು ಹೊಂದಿರುವ ಹಾಗೆಯೇ, ಆತನು ನಮ್ಮನ್ನು ತಮ್ಮ ಸ್ವರೂಪದಲ್ಲಿ ಮಕ್ಕಳನ್ನು ಉಂಟುಮಾಡಿದನು (ಆ.ಕಾ. 5:1). ನಾವು ಆತನ ಕುಟುಂಬದವರು. ಆತನು ನಮ್ಮೊಂದಿಗೆ ಸಂವಹನ (ಸಂಪರ್ಕ) ಮಾಡುವನು ಮತ್ತು ಶಾಶ್ವತ ಸಂಬಂಧ ಬೆಳೆಸುವನು. ಹೀಗಾಗಿ ದೇವರ ಸ್ವರೂಪ ಎಂಬುದು "ಮಾನಸಿಕ ಸ್ವರೂಪ". ಈ ಸ್ವರೂಪ ಎರಡು ರೂಪಗಳನ್ನು ಶಕ್ತಗೊಳಿಸುತ್ತದೆ. ಒಂದು ದೈವಿಕವಾದದ್ದು ಮತ್ತು ಇನ್ನೊಂದು ಮಾನವ ಕುಲಕ್ಕೆ ಸಂಬಂಧಿಸಿದ್ದು. ಈ ಎರಡೂ ಮನಸ್ಸಿನಲ್ಲಿ ಸಂಧಿಸುತ್ತವೆ. ಇದು ತಾನೇ

ನಿಖರವಾಗಿ ಶಿಕ್ಷಣದಲ್ಲಿ ನಡೆಯುತ್ತದೆ. ಮೊದಲನೆಯದಾಗಿ ಮನೆಯಲ್ಲಿ ಮಾತಾ–ಪಿತೃಗಳು ಮತ್ತು ಮಕ್ಕಳ ನಡುವೆ ಹಾಗು ನಂತರ ಶಾಲೆಯಲ್ಲಿ ಶಿಕ್ಷಣದ ಕೆಲಸವನ್ನು ಶಿಕ್ಷಕರು ನಡೆಸುವರು. ದೇವರು, ಶಿಕ್ಷಣವೆಂಬ ಈ ಪ್ರಕ್ರಿಯೆಯನ್ನು ಏಕೆ ಆರಂಭಿಸಿದನು ಎಂಬುದು ಈಗ ನಮಗೆ ಸ್ಪಷ್ಟವಾಗಿರಬೇಕು. ನಮಗೂ ಮತ್ತು ಇತರೇ ಜೀವಿಗಳಿಗೂ ವ್ಯತ್ಯಾಸ ಇರುವುದೇ ಇಲ್ಲ. ಆತನು ನಮ್ಮನ್ನು ಆತನ ಸ್ವರೂಪದಲ್ಲಿ ಉಂಟುಮಾಡಿದನು. ಹೀಗೆ ಉಂಟುಮಾಡಿದ್ದರಿಂದ ಆತನು ನಮಗೆ ಬೋಧನೆ ಮಾಡುವುದು ಸಾಧ್ಯವಾಯಿತು ಮತ್ತು ಆತನ ಸ್ವರೂಪ ನಮ್ಮಲ್ಲಿ ಪ್ರತಿಬಿಂಬಿಸುವ ಹಾಗೆ ಆತನಿಂದ ಪಾಠ ಕಲಿಯುವುದು ಸಾಧ್ಯವಾಯಿತು.

**ವಿಮೋಚನೆಯ ಕಥೆಯೆಂದರೆ, ಅದು ಸೃಷ್ಟಿಯಿಂದ ಮಾನವಾವತಾರದವರೆಗೂ, ಮಾನವಾವತಾರದಿಂದ ಮತ್ತೆ ದೇವರ ಸ್ವರೂಪ ನಮ್ಮಲ್ಲಿ ಸೃಷ್ಟಿಯಾಗುವವರಿಗೂ ನಡೆಯುವ ಶಿಕ್ಷಣದ ಕಥೆ. ದೇವರು ಒಬ್ಬ ಶಿಕ್ಷಕ, ಎಲ್ಲ ಕಾಲಕ್ಕೂ ಪರಲೋಕವೇ ನಮ್ಮ ಶಾಲೆ (ಎಲೆನ್ ಜಿ ವೈಟ್, ಎಜುಕೇಷನ್, ಪುಟ 301). ಮನೆಯಲ್ಲಿ, ಸಭೆಯಲ್ಲಿ, ಶಾಲೆಯಲ್ಲಿ, ವಿಶ್ವವಿದ್ಯಾನಿಲಯದಲ್ಲಿ ಮತ್ತು ಜೀವನದುದ್ದಕ್ಕೂ, ಮೇಲಿನ ಹೇಳಿಕೆಗೆ ಸಂಬಂಧಿಸಿದಂತೆ ಕ್ರೈಸ್ತೀಯ ಶಿಕ್ಷಣಕ್ಕೆ ವಚನಬದ್ಧರಾಗಿರಲು ಇರುವ ತೊಡರುಗಳೇನು**?

**ಸೋಮವಾರ** **ನವೆಂಬರ್ 16**

## ಗುರುವಾಗಿ ಯೇಸು

ಯೇಸುಕ್ರಿಸ್ತನನ್ನು ವರ್ಣಿಸಲು ಸತ್ಯವೇದ ಅನೇಕ ಶಬ್ದಗಳನ್ನು ಬಳಸುತ್ತದೆ. ಆತ ದೇವರ ಕುಮಾರ, ಮೆಸ್ಸೀಯ, ಮನುಷ್ಯಕುಮಾರ, ರಕ್ಷಕ, ವಿಮೋಚಕ, ಕರ್ತನು, ದೇವರ ಕುರಿಮರಿ, ಇತ್ಯಾದಿ. ಗಲಿಲಾಯ ಮತ್ತು ಯೂದಾಯದಲ್ಲಿ ಮೂರೂವರೇ ವರ್ಷಗಳ ಕಾಲ ಆತನ ಸೇವೆಯನ್ನು ಅತ್ಯಂತ ಸಮೀಪದಿಂದ ಗಮನಿಸಿದವರು, ಆತನನ್ನು "ಗುರು" ಎಂದೇ ಗುರುತಿಸಿದ್ದರು. ಆತನನ್ನು "ರಬ್ಬಿ" ಎಂದೇ ಕರೆದರು. ಅದರ ಅರ್ಥ: "ಗುರು".

ಯೇಸು ತನ್ನ ಸಾರ್ವಜನಿಕ ದೇವರ ಸೇವೆಯನ್ನು ಮುಂದುವರಿಸಿಕೊಂಡು ಹೋಗಲು ಬೋಧನೆಯ ಕೆಲಸವೇ ಸರಿಯಾಗಿ ಹೊಂದುವಂತದ್ದಾಗಿತ್ತು. ಹೇಗೋ

ಆತನ ವಿಮೋಚನೆಯ ಕೆಲಸ, ಆತನ ಬೋಧನೆಯ ಕೆಲಸಕ್ಕೆ ಸಮಾನವಾಗಿತ್ತು. ಇದನ್ನು ಸುವಾರ್ತೆಯ ಪ್ರವಾದಿ ಬಹಳ ಹಿಂದೆಯೇ ಹೇಳಿದ್ದನು.

**ಯೆಶಾಯ 11:1–9ನ್ನು ಓದಿಕೊಳ್ಳಿರಿ. ಯೇಸುಕ್ರಿಸ್ತನ ಬೋಧನೆಯ ಪಾತ್ರ ಪ್ರಕಟಿಸಿರುವುದೇನು?**

________________________________________

________________________________________

ಅತ್ಯಂತ ಚಕಿತಗೊಳಿಸುವ ಮೆಸ್ಸೀಯನ ಕುರಿತ ಪ್ರವಾದನೆಗಳಲ್ಲಿ ಒಂದನ್ನು ನಾವು ಧರ್ಮಶಾಸ್ತ್ರದ ಯೆಶಾಯನ ಪ್ರವಾದನೆಯ 11ನೇ ಅಧ್ಯಾಯದಲ್ಲಿ ಕಾಣಬಹುದು. ವಚನಗಳು 1–3 ಮೆಸ್ಸೀಯನ ಬರೋಣವನ್ನು ಶೈಕ್ಷಣಿಕ ಪದಗಳಲ್ಲಿ ಹೇಳಿರುವುದನ್ನು ಕಾಣಬಹುದು. ಜ್ಞಾನ, ಆಲೋಚನೆ, ತಿಳುವಳಿಕೆ, ಅರ್ಥಗ್ರಹಿಸುವಿಕೆ ಇತ್ಯಾದಿ. ಆ ಇಡೀ ವೇದಭಾಗ ಈ ಗಮನಾರ್ಹ ವಾಗ್ದಾನದೊಂದಿಗೆ ಮುಕ್ತಾಯವಾಗುತ್ತದೆ: "ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಜ್ಞಾನವು ತುಂಬಿಕೊಂಡಿರುವುದು" (ಯೆಶಾ 11:9). ಬಹುಶಃ ಅಂತಹ ಸತ್ಯವೇದದ ಬೋಧನೆ ವೈಟಮ್ಮನವರಿಗೆ ಸ್ಫೂರ್ತಿ ಕೊಟ್ಟಿದ್ದರಿಂದ ಅವರು "ಎಜುಕೇಷನ್" ಪುಸ್ತಕ ಬರೆದಂತೆ ಕಾಣುತ್ತದೆ. ಆ ಪುಸ್ತಕದಲ್ಲಿ ಅವರು ಶೈಕ್ಷಣಿಕ ಮತ್ತು ವಿಮೋಚನೆಯ ಕೆಲಸ ಒಂದೇ (ಎಜುಕೇಷನ್, ಪುಟ 30ನ್ನು ನೋಡಿ) ಎಂದಿದ್ದಾರೆ.

ಯೋಹಾನ 3:1–3ನ್ನು ಓದಿಕೊಳ್ಳಿರಿ. ನಿಕೋದೋಮನು, ಯೇಸುವನ್ನು "ರಬ್ಬಿ" (ಗುರುವು) ಎಂದೇ ಸಂಬೋಧಿಸುತ್ತಾನೆ. ಯೇಸುವಿನ ಬೋಧನೆಯ ವರ ಪರಲೋಕದಿಂದ ಬಂದದ್ದು ಎಂದು ಗುರುತಿಸುತ್ತಾನೆ. ಆತನು ಎಸಗಿದ ಅದ್ಭುತ ಕಾರ್ಯಗಳನ್ನು ದೇವರ ಸಹಾಯವಿಲ್ಲದೆ ಮಾಡಲಾಗುವುದಿಲ್ಲ ಎನ್ನುತ್ತಾನೆ. ಆತನಲ್ಲಿರುವ ಅಗಾಧವಾದ ಜ್ಞಾನ ಸಂಪತ್ತನ್ನು ಹೊಗಳುತ್ತಾನೆ. ಯೇಸುಸ್ವಾಮಿ, ತಾನು ಪರಲೋಕದಿಂದ ಬಂದವನೂ, ತನ್ನ ಜ್ಞಾನವು ಪರಲೋಕದಿಂದ ಬಂದದ್ದೂ ಆಗಿರುವುದರಿಂದ ಅವನ ಅಭಿಪ್ರಾಯವನ್ನು ಅಂಗೀಕರಿಸಿಕೊಂಡು, ಅವನಿಗೆ ಪ್ರತ್ಯುತ್ತರ ಕೊಡುವಾಗ– **"ಒಬ್ಬನು ಹೊಸದಾಗಿ**

**ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು**" ಎಂದು ಹೇಳುತ್ತಾನೆ. ಇದರ ಅರ್ಥ: ಬೇರೆಯವರಿಗೆ ಬೋಧಿಸುವ ಅಧಿಕಾರ, ಅದು ಯೇಸುವೇ ಆಗಿರಲಿ, ದೇವರಿಂದ ಕೊಡಲ್ಪಟ್ಟಿರುತ್ತದೆ.

ಖಂಡಿತವಾಗಿಯೂ ಬೋಧಿಸುವ ಕಲೆ ದೇವರಿಂದ ಪ್ರಾಪ್ತವಾದ ವರ; ದೇವರ ಆದೇಶ; ಯೇಸುಕ್ರಿಸ್ತ ಅದನ್ನು ಭೂಲೋಕದ ತನ್ನ ಜೀವನಕ್ಕೆ ಆಯ್ಕೆ ಮಾಡಿಕೊಂಡನು. ತಮಗೆ ದೇವರಿಂದ ಅಧಿಕಾರ ಕೊಡಲ್ಪಟ್ಟಿದೆ ಎಂದು ಬೀಗುತ್ತಿದ್ದವರೂ, ಕ್ರಿಸ್ತನ ಜ್ಞಾನ ಪರಲೋಕದಿಂದ ಬಂದದ್ದು ಎಂದು ಗುರುತಿಸಿದ್ದರು.

**ದೇವರ ಜ್ಞಾನವು ಇಡೀ ಪ್ರಪಂಚವನ್ನು ಆವರಿಸುತ್ತಾ ಸತ್ಯವೇದದ ಪ್ರವಾದನೆ ನೆರವೇರುತ್ತಿರುವುದನ್ನು ನೋಡುತ್ತಿರುವ ನಮಗೆ ಇಲ್ಲಿರುವ ಪಾತ್ರ ಯಾವುದು?**

**ಮಂಗಳವಾರ** **ನವೆಂಬರ್ 17**

## ಮೋಶೆಯೂ ಮತ್ತು ಪ್ರವಾದಿಗಳೂ

2 ತಿಮೊಥಿ 3:14–17ನ್ನು ಓದಿಕೊಳ್ಳಿರಿ. ಕ್ರೈಸ್ತೀಯ ಶಿಕ್ಷಣದಲ್ಲಿ ಧರ್ಮಶಾಸ್ತ್ರದ ಪಾತ್ರವನ್ನು ಕುರಿತು ಈ ವಾಕ್ಯಗಳು ಹೇಳುವುದೇನು?

________________________________________

________________________________________

ಸತ್ಯವೇದದ ಮೊದಲ ಭಾಗವನ್ನು "ಟೋರಾ" ಎಂದು ಕರೆಯಲಾಗಿದೆ, ಕೆಲವೊಮ್ಮೆ ಇದನ್ನು "ಕಾಯಿದೆ" ಎಂದೂ ಸಹ ಭಾಷಾಂತರಿಸಲಾಗಿದೆ. ಯಾಕೆಂದರೆ ಅನೇಕ ಕಾಯಿದೆಗಳು ಈ ಪುಸ್ತಕಗಳಲ್ಲಿವೆ. ಆದರೆ "ಟೋರಾ" ಎನ್ನುವುದರ ಅರ್ಥ "ಬೋಧನೆ" ಅಥವಾ "ಶಿಕ್ಷಣಕೊಡು" ಎಂದಾಗಿದೆ. ಆದರೆ ಅನೇಕರು ದೇವರ ಕೃಪಾವರಗಳು ನಮ್ಮೊಂದಿರುವುದಕ್ಕಾಗಿ ನಾವು ಪರಿಪಾಲಿಸಬೇಕಾದ ನಿಯಮಗಳು ಮತ್ತು ವಿಧಿ–ಕಟ್ಟುಪಾಡುಗಳಿವು ಎಂದು "ಟೋರಾ"ವನ್ನು ಅರ್ಥಮಾಡಿಕೊಂಡಿದ್ದಾರೆ. ಆದರೆ ಅದು ಆಗಲ್ಲ. "ಕಾಯಿದೆ" ಎಂದರೆ ಅದು ಬೋಧನೆಯ ಸಾಮಗ್ರಿ. ದೇವರು ನಮ್ಮನ್ನು ಸೃಷ್ಟಿ ಮಾಡಿದಾಗ, ಒಡಂಬಡಿಕೆಯ ಸಂಬಂಧದಲ್ಲಿ ನಾವು ಹೇಗೆ ಯಶಸ್ವಿಯುತವಾಗಿಯೂ ಮತ್ತು

ಕ್ಷೇಮವಾಗಿಯೂ ಜೀವಿಸಬೇಕು ಎಂಬ ವಿಷಯವನ್ನು ಕುರಿತು ಈ ಬೋಧನೆಯ ಸಾಮಗ್ರಿ ಮಾತನಾಡುತ್ತದೆ.

ಇಬ್ರಿಯ ಸತ್ಯವೇದದ ಮುಂದಿನ ಎರಡು ಭಾಗಗಳಲ್ಲಿ ಒಂದಾದ ಪ್ರವಾದಿಗಳು, ದೇವರ ಮಕ್ಕಳು ಈ ಶೈಕ್ಷಣಿಕ ಸಾಮಗ್ರಿಯಲ್ಲಿ ಹೇಗೆ ಪಾರಂಗತರಾದರು ಮತ್ತು ಅದನ್ನು ಅನುಸರಿಸಿ ಬದುಕಿ ಬಾಳಿದರು (ಹಿಂದಿನ ಪ್ರವಾದಿಗಳು ಅಥವಾ ಚರಿತ್ರೆಯ ಪುಸ್ತಕಗಳು) ಈ ಶೈಕ್ಷಣಿಕ ಸಾಮಗ್ರಿಯಿಂದ (ನಂತರ ಬಂದ ಪ್ರವಾದಿಗಳು) ಏನು ಕಲಿತರು ಎಂಬುದನ್ನು ಕುರಿತು ವರದಿ ಮಾಡಿದೆ. ಇನ್ನು ಹಳೇ ಒಡಂಬಡಿಕೆಯ ಇನ್ನುಳಿದ (ಇಬ್ರಿಯ ಭಾಷೆಯಲ್ಲಿ ರೈಟಿಂಗ್ಸ್ ಎಂದು ಕರೆಯಲ್ಪಟ್ಟ) ಭಾಗ ಯಶಸ್ವಿಯುತವಾದ ಮತ್ತು ಕಡಿಮೆ ಯಶಸ್ಸು ತೋರಿದ ಶಿಕ್ಷಕರ ಉದಾಹರಣೆಗಳಿಂದಲೂ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಅನುಭವಗಳಿಂದಲೂ ತುಂಬಿದೆ. ಈ ಪುಸ್ತಕಗಳಲ್ಲಿ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಯಶಸ್ಸಿನ ಉದಾಹರಣೆಗಳು: ಎಸ್ತೇರಳು, ರೂತಳು, ದಾನಿಯೇಲ ಮತ್ತು ಯೋಬನ ಪುಸ್ತಕಗಳೇ ಆಗಿವೆ. ಇಲ್ಲಿ ಯಶಸ್ಸಾಗದವರೆಂದರೆ ಯೋಬನ ಸ್ನೇಹಿತರಷ್ಟೇ. ಕೀರ್ತನೆಗಳು ಒಂದು ಗೀತೆಗಳ ಪುಸ್ತಕವಾಗಿದೆ. ಈ ಗೀತೆಗಳಲ್ಲಿ ಕೀರ್ತನೆ 1, ಕೀರ್ತನೆ 37 ಮತ್ತು ಕೀರ್ತನೆ 73 ಶೈಕ್ಷಣಿಕ ಗೀತೆಗಳಾಗಿವೆ.

ಸುವಾರ್ತೆಗಳು, ಅದರಲ್ಲೂ ವಿಶೇಷವಾಗಿ ಯೇಸುಕ್ರಿಸ್ತನ ಸಾಮ್ಯಗಳು, ಶೈಕ್ಷಣಿಕ ಉದ್ದೇಶಗಳಿಗಾಗಿ ಸಮೃದ್ಧಿಯಾದ ಸಂಪನ್ಮೂಲ ಸಾಮಗ್ರಿಗಳಿಂದ ತುಂಬಿವೆ. ಪೌಲನ ಅನೇಕ ಪತ್ರಗಳು ಬಲವಾದ ಸುವಾರ್ತೆ ಸಾರುವ ಘೋಷಣೆಗಳೊಂದಿಗೆ ಆರಂಭವಾದರೂ, ಕೊನೆಗೆ ಅವು ಶೈಕ್ಷಣಿಕ ಸಾಮಗ್ರಿಗಳಾಗಿಯೂ, ಕ್ರೈಸ್ತರ ದೈನಂದಿನ ಜೀವನಕ್ಕೆ ಪ್ರಾಯೋಗಿಕ ಪಾಠಗಳಾಗಿಯೂ ಅಂತ್ಯವಾಗುತ್ತವೆ. ಪ್ರಕಟನೆಯ ಪುಸ್ತಕವೂ ಸಹ, ಶೈಕ್ಷಣಿಕ ಸಂಪನ್ಮೂಲಗಳ ಸಾಮಗ್ರಿಗಳಿಂದ ತುಂಬಿದೆ. ಉದಾ: ಕ್ರೈಸ್ತ ಸಭೆಯ ಭವಿಷ್ಯವನ್ನು ಪ್ರಕಟಗೊಳಿಸುವಿಕೆ ಅಥವಾ ತೆರೆಯ ಎಳೆಯುವಿಕೆ ಅಂದರೆ ದೇವರ ಕುರಿಮರಿಯೂ, ರಕ್ಷಕನಾದ ಯೇಸುವು ಮತ್ತು ಭವ್ಯ ಶಿಕ್ಷಕನ ಕುರಿತ ಸತ್ಯ ಪ್ರಕಟಗೊಳ್ಳುತ್ತದೆ (ಪ್ರಕ 5:1–5).

**ಮೋಶೆಯ ಪುಸ್ತಕಗಳಲ್ಲಿ ಕಾಣಿಸಿಕೊಳ್ಳುವ ಎಲ್ಲ ಬೋಧನಾ ಸಾಮಗ್ರಿಗಳು**

**ನಮ್ಮ ಕಾಲಕ್ಕೆ ಅನ್ವಯವಾಗದೆಂದು ಕೆಲವರು ಹೇಳುತ್ತಾರೆ. ಅದು ಸರಿ ಸಹ. ಧ.ಕಾ. 17:14–20ರಲ್ಲಿ ರಾಜರುಗಳ ಕುರಿತ ಬೋಧನೆಯಿದೆ. ರಾಜ್ಯವನ್ನಾಳುವವರನ್ನೂ ಆಳುವವರ ಆಯ್ಕೆಯ ಕುರಿತು ಬಹಳ ಸ್ಪಷ್ಟವಾದ ಬೋಧನೆಯನ್ನೂ ಇಲ್ಲಿ ನೋಡಬಹುದು. ಹೌದು, ನಿಜ, ಇಂದು ನಾವು ನಮ್ಮ ಸಭೆಯನ್ನು ಆಳಲು ರಾಜರುಗಳನ್ನು ಆರಿಸುವುದಿಲ್ಲ. ಸತ್ಯವೇದದಲ್ಲಿರುವ ಈ ಬೋಧನ ಸಾಮಗ್ರಿಗಳನ್ನು ನಮ್ಮ ಕಾಲಕ್ಕೆ ಯೋಗ್ಯವಾದ ರೀತಿಯಲ್ಲಿ ಹೇಗೆ ಅನ್ವಯ ಮಾಡಬೇಕು ಎಂಬುದನ್ನು ಇತ್ಯರ್ಥ ಮಾಡುವುದು ಹೇಗೆ?**

**ಬುಧವಾರ** **ನವೆಂಬರ್ 18**

## ಬುದ್ಧಿವಂತ ಸ್ತ್ರೀಯರು ಮತ್ತು ಪುರುಷರು

ಶಾಲೆ, ಅಧ್ಯಯನ ಮತ್ತು ಶಿಕ್ಷಣ ಎಂಬ ಪದಗಳು ನಮ್ಮ ಕಾಲದಲ್ಲಿ ಸ್ಪಷ್ಟವಾಗಿ ಅರ್ಥವಾಗುತ್ತವೆ, ಆದರೆ ಸತ್ಯವೇದದ ಕಾಲದಲ್ಲಿ ಈ ಪದಗಳು ಸಾಮಾನ್ಯ ಪದಗಳಾಗಿರಲಿಲ್ಲ. ಬುದ್ಧಿವಂತಿಕೆ ಅಥವಾ ಜ್ಞಾನ ಎಂಬ ಪದ ಆ ಕಾಲಕ್ಕೆ ಸಾಮಾನ್ಯವಾಗಿ ಬಳಕೆಯಲ್ಲಿತ್ತು. ಉದಾ: ಹಳೇ ಒಡಂಬಡಿಕೆ ಬುದ್ಧಿವಂತ ಪುರುಷರು ಮತ್ತು ಸ್ತ್ರೀಯರ ಕುರಿತು ಉಲ್ಲೇಖ ಮಾಡಿದೆ (2 ಸಮು 14:2; ಜ್ಞಾ 16:23).

**1 ಅರಸು 29–34ನ್ನು ಓದಿಕೊಳ್ಳಿರಿ. ಈ ವೇದಭಾಗ ನಮಗೆ ಜ್ಞಾನದ ಪ್ರಾಮುಖ್ಯತೆಯನ್ನು ಕುರಿತು ಬೋಧಿಸುವುದೇನು?**

---

---

ಸೊಲೊಮೋನ, ಪ್ರಾಣಿಗಳು ಮತ್ತು ಸಸ್ಯಗಳ ಜೀವನ ಕುರಿತು ಮಾತನಾಡಿದ್ದನು. ಜ್ಞಾನೋಕ್ತಿಗಳನ್ನು ಬರೆದಿದ್ದನು. ಇಂತಹ ಪ್ರತಿಭೆಗಳ ನಿಮಿತ್ತ ಅವನನ್ನು ಪ್ರಪಂಚದಲ್ಲೇ ಅತ್ಯಂತ ಜ್ಞಾನಿಯಾದ ಮನುಷ್ಯನೆಂದು ಗುರುತಿಸಲಾಗಿದೆ. ಹೀಗಾಗಿ ಅವನನ್ನು ಶಿಕ್ಷಣದ ಮನುಷ್ಯನೆಂದು ಹೇಳಲಾಯಿತು (1 ಅರಸು 4:29–34). ಜ್ಞಾನೋಕ್ತಿ ಮತ್ತು ಪ್ರಸಂಗಿ ಪುಸ್ತಕಗಳು, ವೈವಿಧ್ಯಮಯ ವಿಷಯಗಳ ಕುರಿತು ಅನೇಕ ಜ್ಞಾನಬೋಧನೆ ಮಾಡಿವೆ. ಇವುಗಳ ಕರ್ತೃ ಸೊಲೊಮೋನನೇ

ಆಗಿದ್ದಾನೆ. ಇನ್ನೂ ಅನೇಕ ಪುರಾತನ ಬುದ್ಧಿವಂತ ಶಿಕ್ಷಕರೂ ತಮ್ಮ ಅಮೂಲ್ಯ ಕಾಣಿಕೆಯನ್ನು ಸಲ್ಲಿಸಿದ್ದಾರೆ (ಜ್ಞಾ 1:1; ಜ್ಞಾ 25:1; ಜ್ಞಾ 30:1; ಜ್ಞಾ 31:1).

ಸತ್ಯವೇದದ ಪ್ರಕಾರ, ಜ್ಞಾನ ಎಂಬುದು ನಮ್ಮ ಇಂದಿನ ಶಿಕ್ಷಣವೇ ಆಗಿದೆ. ಚಿಕ್ಕಮಕ್ಕಳು ಶಿಕ್ಷಣವನ್ನು ತಂದೆ-ತಾಯಿಗಳಿಂದ ಮತ್ತು ಶಿಕ್ಷಕರುಗಳಿಂದ ಪಡೆದುಕೊಳ್ಳುತ್ತಾರೆ (ಪ್ರಸಂಗಿ 12:1), ಆದರೆ ಒಬ್ಬ ವ್ಯಕ್ತಿ ಜೀವನದುದ್ದಕ್ಕೂ ಜ್ಞಾನ ಸಂಗ್ರಹ ಮಾಡುತ್ತಾ ಹೋಗುತ್ತಾನೆ. ಎರಡನೆಯವಾಗಿ ಇನ್ನೊಂದು ಅಂಶವನ್ನು ಗಮನಿಸಬೇಕು: ಜ್ಞಾನಕ್ಕೆ ಪ್ರಾಯೋಗಿಕ ಮುಖವೂ ಸಹ ಉಂಟು; ಉದಾ: **"ಸೋಮಾರಿಯೇ, ಇರುವ ಹತ್ತಿರ ಹೋಗಿ ಅದರ ನಡವಳಿಕೆಯನ್ನು ನೋಡಿ ಜ್ಞಾನವನ್ನು ತಂದುಕೋ.... ಕೊಯ್ಲಿನ ಕಾಲದಲ್ಲಿ ತನಗೆ ಬೇಕಾದಷ್ಟು ಆಹಾರವನ್ನು ಸಂಗ್ರಹಿಸಿಟ್ಟುಕೊಳ್ಳುವುದು" (ಜ್ಞಾ 6:6-8).**

ಆದರೂ ಜ್ಞಾನಕ್ಕೆ ಪ್ರಾಯೋಗಿಕ ಮುಖ ಮಾತ್ರವಿಲ್ಲ, ಆದರೆ ಸಿದ್ಧಾಂತದ ಮುಖವೂ ಉಂಟು. ಅಂತಹ ಜ್ಞಾನ ದೇವರ ಮೇಲಿನ ನಂಬಿಕೆಯಿಂದ ಪ್ರಾರಂಭವಾಗುತ್ತದೆ ಮತ್ತು ಕೆಲವು ಆಧಾರಭೂತ ತತ್ವಗಳನ್ನು ಅನುಸರಿಸುತ್ತದೆ (ಜ್ಞಾ 1:7). ನಾವು ಜವಾಬ್ದಾರಿಯಿಂದ ಜೀವಿಸಲೂ ಮತ್ತು ಪರರಿಗಾಗಿ ಜೀವಿಸಲು ಜ್ಞಾನವೇ ಸಹಾಯ ಮಾಡುವುದು. ದುರ್ದಶೆಯಿಂದಲೂ ನಮ್ಮನ್ನು ರಕ್ಷಿಸಲು ಜ್ಞಾನವೇ ಸಹಾಯ ಮಾಡುವುದು. ಕೊನೆಗೆ ಹೇಳಬಯಸುವದೇನೆಂದರೆ, ಇಂದಿನ ಶಿಕ್ಷಣದಂತೆಯೇ, ಜೀವನದಲ್ಲಿ ನಮಗೆ ಎದುರಾಗುವ ಎಲ್ಲಾ ಪ್ರಶ್ನೆಗಳಿಗೆ ಜ್ಞಾನ ಉತ್ತರ ಕೊಡದು, ಆದರೆ ನಮಗೆ ಏನು ಗೊತ್ತಿದೆಯೋ ಅದರಲ್ಲಿ ಸಂತೃಪ್ತರಾಗಿದ್ದುಕೊಂಡು, ಗೊತ್ತಿಲ್ಲದಿರುವುದನ್ನು ಅರಿಯಲು ಶೋಧವನ್ನು ಮುಂದುವರಿಸೋಣ. ಇಂತಹ ನಿಲುವು ದೇವರನ್ನು ಇನ್ನು ಹೆಚ್ಚಾಗಿ ಅರಿಯಲು ಮತ್ತು ಆತನ ಕೃಪೆಯಲ್ಲಿ ಭರವಸೆಯಿಡಲೂ ಸಹಾಯ ಮಾಡುವುದು. ಯೆರೆಮೀಯ 18:18ರ ಪ್ರಕಾರ, ಬುದ್ಧಿವಂತ ಶಿಕ್ಷಕನ ಪಾತ್ರವು, ಯಾಜಕನ ಮತ್ತು ಪ್ರವಾದಿಯ ಪಾತ್ರಕ್ಕೆ ಸರಿಸಮವಾಗಿದೆ. ಈ ಮೂವರು ದೇವರಿಂದ ಬಂದ ಸಂದೇಶವನ್ನು ಜನಗಳೊಂದಿಗೆ ಹಂಚಿಕೊಳ್ಳುವರು. ಆ ಸಂದೇಶವು ಆಜ್ಞೆ ಮೂಲದ ಬೋಧನೆ, ಶೈಕ್ಷಣಿಕ ತಿಳುವಳಿಕೆ ಮತ್ತು ದೇವರಿಂದ ವಿಶೇಷ ಸಂದೇಶಗಳನ್ನು ಒಳಗೊಂಡಿರುತ್ತವೆ.

**ನಾವು ಜ್ಞಾನವನ್ನು ಪಡೆಯುವುದು ಮತ್ತು ಪಡೆದುಕೊಂಡದ್ದನ್ನು ಇತರರೊಂದಿಗೆ ಹಂಚಿಕೊಳ್ಳುವುದು ಹೇಗೆ? ಇದು ನಮಗೆ ಬಹಳ ಮುಖ್ಯವೇಕೆ?**

**ಮಂಗಳವಾರ** **ನವೆಂಬರ್ 19**

## ಆದಿಸಭೆಯಲ್ಲಿ ಶಿಕ್ಷಣ

ಸತ್ಯವೇದ, ಶಿಕ್ಷಣದಲ್ಲಿರುವ ತತ್ವಗಳಲ್ಲಿ, ಒಂದು ತತ್ವ, ಯೇಸು ಕ್ರಿಸ್ತನನ್ನು ಶ್ರೇಷ್ಠ ಗುರುವೆಂದು ಪ್ರತಿಪಾದಿಸುತ್ತದೆ. ಆ ಗುರು ತನ್ನ ಶಿಷ್ಯರಿಗೆ ಶಿಕ್ಷಣ ಕೊಟ್ಟು ಮುಗಿಸಿದ ನಂತರ, ಅವರನ್ನು ಸ್ವತಂತ್ರನಾಗಿ ಅಭ್ಯಾಸಿಸಲು ಬಿಡುತ್ತಾನೆ. ಆತನ ಶಿಷ್ಯರುಗಳು, ಅವನೊಂದಿಗೆ ಮೂರೂವರೆ ವರ್ಷಗಳ ಕಾಲ ಕಳೆದಿದ್ದಾರೆ. ಇದು ಹೆಚ್ಚುಕಡಿಮೆ ಪ್ರೌಢಶಾಲೆಯ ಅಥವಾ ಕಾಲೇಜು ಶಿಕ್ಷಣ ಮುಗಿಸಲು ಬೇಕಾಗುವ ಸಮಯ. ಈ ಅವಧಿ ಮುಗಿದ ನಂತರ, ಸಾಮಾನ್ಯವಾಗಿ ವಿದ್ಯಾರ್ಥಿಗಳು ತಮ್ಮನ್ನು ತಾವೇ ಸಂಬಾಳಿಸಿಕೊಳ್ಳಲು ಸಿದ್ಧರಾಗಿರುತ್ತಾರೆ.

ಯೇಸುಸ್ವಾಮಿಗೆ ಶಿಷ್ಯರಿಗೆ ಏನು ಬೇಕಾಗಿದೆ ಎಂದು ಚೆನ್ನಾಗಿಯೇ ಗೊತ್ತಿದೆ. ಆದ್ದರಿಂದಲೇ ಅವರು ತನ್ನ ಹಿಂಬಾಲಕರಿಗೆ, ಪವಿತ್ರಾತ್ಮನ ಪರಾಮರಿಕೆಯಲ್ಲಿ ಅವರಿಗೆ ಶಿಕ್ಷಣವನ್ನು ಮುಂದುವರಿಸುತ್ತಾನೆ. ಎಲ್ಲೋ ಒಂದು ಕಡೆ ಈ ಶಿಕ್ಷಕ ಅಥವಾ ಮಾರ್ಗದರ್ಶಿಯನ್ನು, ಸಹಾಯಕ ಅಥವಾ ವಕೀಲನೆಂದೂ, ಕ್ರಿಸ್ತನು ಈತನನ್ನು ತನ್ನ ಶಿಷ್ಯರೊಂದಿಗೆ ಶಾಶ್ವತವಾಗಿ ನೆಲೆಸಿರಲು ಅನುವು ಮಾಡಿಕೊಟ್ಟಿದ್ದಾನೆ ಎಂದು ಹೇಳಲಾಗಿದೆ (ಯೋಹಾನ 14:16,17). ಈತನನ್ನು ಸತ್ಯದ ಆತ್ಮನೆಂದು ಗುರುತಿಸಲಾಗಿದೆ. ಪವಿತ್ರಾತ್ಮ ಶಿಕ್ಷಕನೆಂದು ಗುರುತಿಸಿಲ್ಲ, ನಿಜ, ಆದರೆ ಪವಿತ್ರಾತ್ಮನ ಕೆಲಸ ಶೈಕ್ಷಣಿಕವಾದದ್ದು, ಅದರಲ್ಲೂ ಮುಖ್ಯ ಆತನು ಸತ್ಯವನ್ನು ಹುಡುಕಲೂ ಮತ್ತು ಕಂಡುಕೊಳ್ಳಲು ಸಹಾಯ ಮಾಡುವನು.

1 ಕೊರಿಂಥ 2:1–16ನ್ನು ಓದಿಕೊಳ್ಳಿರಿ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಪೌಲನು ಇಲ್ಲಿ ಏನನ್ನು ತುಂಬಾ ಮುಖ್ಯ ಎಂದು ಹೇಳುತ್ತಿದ್ದಾನೆ?

ಮೊದಲ ಬಾರಿಗೆ ಕೊರಿಂಥ ಸಭೆಗೆ ಬಂದಿದ್ದಾಗ, ಪೌಲನು, ಅದರೊಂದಿಗೆ ಯೇಸುಕ್ರಿಸ್ತನನ್ನೂ ಮತ್ತು ಆತನು ಶಿಲುಬೆಗೆ ಹಾಕಲ್ಪಟ್ಟ ವಿಷಯ ಬಿಟ್ಟರೆ ಬೇರೆ ಯಾವ ವಿಷಯವನ್ನೂ ಮಾತನಾಡಿರಲಿಲ್ಲ ಎಂಬುದನ್ನು ನೆನೆಪಿಸುತ್ತಾನೆ (1 ಕೊರಿಂಥ 2:2). ನಿಪುಣ ಜ್ಞಾನತನವೇನೂ ಇಲ್ಲ.

ಅವನು ಸುವಾರ್ತೆಯನ್ನಷ್ಟೇ ಪ್ರಕಟಿಸಿದ್ದನು. ಆದರೆ ಅದೇ ಕೊನೆಯಲ್ಲಿ (1 ಕೊರಿಂಥ 2:6). ಇದೇ ಕ್ರೈಸ್ತರು ಪ್ರೌಢಾವಸ್ಥೆಗೆ ಬಂದಾಗ ಮತ್ತೆ ಪೌಲನು ಜ್ಞಾನೋಪದೇಶ ಮಾಡಲು ಬರುವನು. ಜಗದುತ್ಪತ್ತಿಗೆ ಮೊದಲೇ ಇದ್ದ, ಲೋಕಕ್ಕೆ ಮರೆಯಾಗಿದ್ದ ಜ್ಞಾ (ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥವನ್ನು ತಿಳಿಸುವಲ್ಲಿ ದೇವರ ಜ್ಞಾನವನ್ನೇ ಹೇಳುತ್ತೇನೆ – 1 ಕೊ 2:7). ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ (1 ಕೊ 2:10). ಕಲಿಸುವವನ ಆತ್ಮದೊಂದಿಗೆ ಪವಿತ್ರಾತ್ಮನು ಒಂದುಗೂಡಿದಾಗ, ಎಲ್ಲಾ ಅಧ್ಯಯನವು ಆತನ ಮಾರ್ಗದರ್ಶನದಲ್ಲಿಯೇ ನಡೆಯುವುದು.

ಅವರ ಅಧ್ಯಯನ ಇನ್ನೂ ಆಳವಾಗಿರುವುದು ಹೇಗೆ? ಪವಿತ್ರಾತ್ಮನಿಂದ ಕೈಹಿಡಿದು ನಡೆಸಲ್ಪಡುವವರಿಗೆ ಅದೆಷ್ಟು ಕಲಿಕೆಯ ಬಾಗಿಲು ತೆರೆಯಲ್ಪಡುವುದು? ಈ ಅಧ್ಯಾಯ ಕೊನೆಗೆ ಪ್ರವಾದಿ ಯೆಶಾಯನ ಒಂದು ಹೇಳಿಕೆಯನ್ನು ಉಲ್ಲೇಖಿಸುತ್ತಾ ಮುಕ್ತಾಯ ಮಾಡುತ್ತಾನೆ. "ಯೆಹೋವನ ಆತ್ಮಕ್ಕೆ ಯಾವನು ವಿಧಿಯನ್ನು ನೇಮಿಸಿದನು? ಯಾವನು ಆಲೋಚನಾಕರ್ತನಾಗಿ ಆತನಿಗೆ ಉಪದೇಶಿಸಿದನು?" (ಯೆಶಾಯ 40:13). ಪ್ರವಾದಿಯು ಸಾಮಾನ್ಯ ಜನರನ್ನು ಉದ್ದೇಶಿಸಿ ಮಾತನಾಡುತ್ತಿದ್ದಾನೆ. ಪೌಲನು, ಅಧ್ಯಾಯದ ಅಂತ್ಯದಲ್ಲಿ, ಈ ಹೇಳಿಕೆಯನ್ನು ಸರಿಪಡಿಸುತ್ತಾ ಹೀಗೆ ಹೇಳಿದ್ದಾನೆ: "**ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವುದಿಲ್ಲ. ನಾವು... ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು**". ಹೀಗಾಗಿ ದೇವರ ಆತ್ಮನಿಂದ ತುಂಬಿರುವವರು ದೇವರ ಮನಸ್ಸನ್ನೂ ತಿಳಿದುಕೊಳ್ಳುವ ಅವಕಾಶವಿದೆ. ಕಲಿಯುವುದಕ್ಕೆ ಎಲ್ಲೆಯಿಲ್ಲ (1 ಕೊರಿಂಥ 2:10–13). ಎಷ್ಟು ಬೇಕಾದರೂ ಕಲಿಯಿರಿ, ಅರ್ಥ ಮಾಡಿಕೊಳ್ಳಿರಿ, ಆದರೆ ಆ ಜ್ಞಾನ ನೀತಿಯ ದಾರಿಯಲ್ಲಿ ನಿಮ್ಮನ್ನು ಕೈಹಿಡಿದು ನಡೆಸಲಿ.

**ಶುಕ್ರವಾರ** **ನವೆಂಬರ್ 20**

**ಹೆಚ್ಚಿನ ಚಿಂತನೆ :** "ಸುವಾರ್ತೆ ಸಾರಲು ರಕ್ಷಕನಿಂದ ಕೊಡಲ್ಪಟ್ಟ ಆ ಮಹಾಕರೆ (ಮತ್ತಾಯ 28:18–20) ಪ್ರಪಂಚದಾದ್ಯಂತ ಒಂದು ಗಮನಾರ್ಹವಾದ ಧಾರ್ಮಿಕ ಚಳುವಳಿಯನ್ನು ಚಾಲನೆಯಲ್ಲಿಟ್ಟಿತ್ತು. ಇಲ್ಲಿ ಕೆಲವು ಅಪೋಸ್ತಲರುಗಳು ಅಥವಾ ದೇವರ ಸೇವಕರುಗಳು (ಎರಡೂ ಪದಗಳು ಸಮಾನಾರ್ಥ ಕೊಡುವ ಪದಗಳಾಗಿವೆ. ಆ ಅರ್ಥ: ಕಳುಹಿಸಲ್ಪಟ್ಟವರು). ಅವರು ಪ್ರಪಂಚದೆಲ್ಲೆಡೆ ಹೋದರು ಮತ್ತು ವಿದ್ಯಾರ್ಥಿಗಳನ್ನು ಒಟ್ಟು ಸೇರಿಸಿದರು; ಅವರನ್ನು ಶಿಷ್ಯರನ್ನಾಗಿಸಿದರು, ಕ್ರಿಸ್ತನನ್ನು ನಂಬಲು ಕರೆಕೊಟ್ಟರು, ದೀಕ್ಷಾಸ್ನಾನ ಮಾಡಿಸಿದರು; ಮತ್ತು ಯೇಸುಕ್ರಿಸ್ತ ಏನೆಲ್ಲಾ ತಮಗೆ ಬೋಧಿಸಿದ್ದನೋ, ಅದನ್ನೆಲ್ಲ ಅವರಿಗೆ ಕಲಿಸಿಕೊಟ್ಟರು. ಈ ಚಿತ್ರಣ ಹೀಗಿದೆ: ಪ್ರಪಂಚದಾದ್ಯಂತ ಕ್ರೈಸ್ತತ್ವ ಅಪ್ಪಿಕೊಂಡ ಜನರು, ವಿವಿಧ ಸಂಸ್ಕೃತಿಗಳ, ವಿವಿಧ ಭಾಷೆಗಳ ಪ್ರತಿನಿಧಿಗಳಾಗಿದ್ದರು. ದೀಕ್ಷಾಸ್ನಾನದ ತೊಟ್ಟಿಯೊಳಗಿನ ನೀರಿನಿಂದ ಎದ್ದು ಬಂದವರು, ಶಾಲೆಗೆ ಪ್ರವೇಶ ಪಡೆದು, ತಮ್ಮ ಶಿಕ್ಷಣವನ್ನು ಪ್ರಾರಂಭಿಸಿದ್ದರು. ಇದರಲ್ಲಿ ಆಶ್ಚರ್ಯವೇನಿಲ್ಲ. ಅವರು ಇನ್ನೂ ಕಲಿಯಬೇಕಾದ್ದು ಬಹಳಷ್ಟಿತ್ತು.

ಕ್ರೈಸ್ತರು ಯಾವಾಗಲೂ ಕಲಿಯುತ್ತಿರುತ್ತಾರೆ ಎಂದರೆ ಅದರ ಅರ್ಥ ಅವರಿಗೆ ಬೌದ್ಧಿಕ ಕುತೂಹಲವಿದೆ ಎಂತಲೋ, ಅಥವಾ ವಿಷಯದ ಮೇಲೆ ಪರಿಣಿತಿ ಸಾಧಿಸಬೇಕೆಂತಲೋ ಅಲ್ಲ, ಆದರೆ ಕ್ರೈಸ್ತೀಯ ಜೀವನ ಮತ್ತು ನಂಬಿಕೆ ದೈನಂದಿನ ಜೀವನದ ಪ್ರತಿ ಮೂಲೆಮೂಲೆಯಲ್ಲೂ ಹರಡಿಕೊಳ್ಳುತ್ತದೆ. ಕಲಿಯಬೇಕಾದ್ದು ಬಹಳಷ್ಟಿದೆ. ಆದ್ದರಿಂದಲೇ ಹೊಸ ಒಡಂಬಡಿಕೆಯ ಪತ್ರಗಳು, ಯೇಸುಕ್ರಿಸ್ತನ ಕುರಿತ ಪ್ರಕಟನೆ ಮತ್ತು ಕ್ರೈಸ್ತರೆಲ್ಲರೂ ಕಲಿಯಬೇಕಾದದ್ದರ ಬಗ್ಗೆ ನೀಡಬೇಕಾದ ಶಿಕ್ಷಣಗಳೆರಡನ್ನೂ ಒಳಗೊಂಡಿವೆ. ಇದಕ್ಕೆ ಒಳ್ಳೇ ಉದಾಹರಣೆ 1 ಕೊರಿಂಥ 2:2ರಲ್ಲಿ "ಯೇಸುಕ್ರಿಸ್ತನನ್ನೇ ಹೊರತು ಬೇರೆ ಯಾವುದನ್ನೂ ತಿಳಿಯುವವನಾಗಿ.." ಎಂದು ಕ್ರಿಸ್ತನನ್ನು ಪ್ರಕಟಿಸುವುದನ್ನು ಮತ್ತು 1 ಕೊರಿಂಥ 4ರಲ್ಲಿ ಶಿಕ್ಷಣ ಆರಂಭಿಸುವುದನ್ನು ಮತ್ತು ಇನ್ನುಳಿದ ಪತ್ರಗಳಲ್ಲಿ ಶಿಕ್ಷಣ ಮುಂದುವರಿಯುವುದನ್ನು ಕಾಣುತ್ತೇವೆ. ಇಲ್ಲಿ ಕ್ರೈಸ್ತರು ಕಲಿಯಬೇಕಾದ್ದು ಏನು?

ಕೆಲಸ, ವಿಶ್ರಾಂತಿ, ಸಾಮಾಜಿಕ ಸಂಗತಿಗಳು, ಸಮುದಾಯ ಸಂಬಂಧಗಳು, ಸಭೆ ಮತ್ತು ಆರಾಧನೆ, ಆರ್ಥಿಕತೆ, ಮಾನವಪ್ರೀತಿ, ಅಧಿಕಾರಿಗಳೊಂದಿಗಿನ ಸಂಬಂಧಗಳು, ಸಲಹೆಗಳು, ಕೌಟುಂಬಿಕ ವ್ಯವಸ್ಥೆಗಳು, ಮದುವೆಯ ಸಂಬಂಧಗಳು, ಮತ್ತು ಮಕ್ಕಳ ಪಾಲನೆ-ಪೋಷಣೆ, ಆಹಾರ ಮತ್ತು ಅವುಗಳ ಸಿದ್ಧತೆ, ಬಟ್ಟೆ, ವಯಸ್ಸಾಗುವಿಕೆ ಮತ್ತು ಜೀವನಾಂತ್ಯಕ್ಕೆ ಮಾಡಿಕೊಳ್ಳುವ ಸಿದ್ಧತೆಗಳು- ವೈಯಕ್ತಿಕ ಜೀವನ ಮತ್ತು ಪ್ರಾಪಂಚಿಕ ಜೀವನ ಇತ್ಯಾದಿ- ಇವೆಲ್ಲವುಗಳ ಬಗ್ಗೆ ಕ್ರೈಸ್ತರು ಸ್ವಲ್ಪವಾಗಿಯಾಗಲಿ ಅಥವಾ ಹೆಚ್ಚಾಗಿಯಾಗಲಿ ತಿಳಿದುಕೊಳ್ಳಬೇಕು. ಇವುಗಳನ್ನು ಅರ್ಥಮಾಡಿಸುವಿಕೆ ಸಹಜವಾಗಿ ಬರುವುದಿಲ್ಲ; ಕಲಿಯಬೇಕು.

## ಚರ್ಚಿಸಬೇಕಾದ ಪ್ರಶ್ನೆಗಳು

1. ದೇವರ ಸಭೆಯ ಸೇವೆಗೆ ಶೈಕ್ಷಣಿಕ ಕೆಲಸ ಮುಖ್ಯವಾಗುವುದು ಹೇಗೆ?

2. ವೈಟಮ್ಮನವರು- "ಪರಲೋಕವೇ ಶಾಲೆ" ಎಂದು ಹೇಳಿದ್ದಾರೆ. ಇದರ ಅರ್ಥವೇನು?

3. ಮತ್ತೆ 1 ಕೊರಿಂಥ 2:1-16ನ್ನು ಓದಿಕೊಳ್ಳಿರಿ. ದೈವಸ್ಫೂರ್ತಿಯ ಮೂಲಕ ದೇವರು ನಮಗೆ ಏನು ಪ್ರಕಟಿಸುತ್ತಿದ್ದಾನೆ ಎಂಬ ವಿಷಯ ಕುರಿತು ಪೌಲ ಇಲ್ಲಿ ಹೇಳಿರುವುದೇನು? ಆಳುವವರು ಮತ್ತು ಕಾಲಜ್ಞಾನ ಏನೂ ಅಲ್ಲ ಎನಿಸುವ ಹಂತಕ್ಕೆ ಬರುತ್ತದೆ ಎಂಬ ಆತನ ಮಾತಿನ ಮೂಲಕ ಆತ ಹೇಳುತ್ತಿರುವುದೇನು? ಹೀಗೆ ಆತನು ಹೇಳುವುದಾದರೆ, ಈ ಕಾಲದ ಜ್ಞಾನವನ್ನು ಏನು ಮಾಡುವುದು?